ಕರ್ನಾಟಕ ಲೋಕಾಯುಕ್ತ

20

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\2102\2013\ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 26.10.2016

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ: ಸರ್ಕಾರಿ ನೌಕರರಾದ ಶ್ರೀ.ಹೆಚ್.ಜಿ.ಚಂದ್ರಶೇಖರಯ್ಯ, ಹಿಂದಿನ ಪೌರಾಯುಕ್ತರು, ನಗರಸಭೆ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ ರವರು ಕರ್ತವ್ಯ ಲೋಪ/ದುರ್ವರ್ತನೆ ಎಸಗಿರುವ ಬಗ್ಗೆ.

*******

ಶ್ರೀಮತಿ.ರಾಜೇಶ್ವರಿ.ಟಿ.ಕೆ., ವಾರ್ಡ್ ನಂ: 9, ಗೋವಿನ ಮರ ಪವರ್ ಹೌಸ್ ಹಿಂಭಾಗ, ತಿಪಟೂರು ತುಮಕೂರು (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಶ್ರೀ.ಹೆಚ್.ಜಿ.ಚಂದ್ರಶೇಖರಯ್ಯ, ಹಿಂದಿನ ಪೌರಾಯುಕ್ತರು, ನಗರಸಭೆ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ ಎದುರುದಾರ ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಅವ್ಯವಹಾರದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. <u>ದೂರಿನ ಸಂಕ್ಷಿಪ್ತ ವಿವರಣೆ:-</u>

ಈ ಪ್ರಕರಣದಲ್ಲಿ ದಿ: 14.10.2016ರಂದು ಅಂತಿಮ ಪರಿಶೀಲನಾ ಟಿಪ್ಪಣಿ ಮಂಡಿಸಲಾಗಿತ್ತು ಆದರೆ ಗೌರವಾನ್ವಿತ ಉಪಲೋಕಾಯುಕ್ತರು ಇನ್ನೊಮ್ಮೆ ಇದರಲ್ಲಿರುವ ದಾಖಲೆಗಳನ್ನು, ಆಕ್ಷೇಪಣೆಯನ್ನು ಪರಿಶೀಲಿಸಿ ಪುನಃ ಅಂತಿಮ ಪರಿಶೀಲನಾ ಟಿಪ್ಪಣಿ ಮಂಡಿಸುವಂತೆ ಆದೇಶಿಸಿದ್ದಾರೆ. ಆದ್ದರಿಂದ ಅಂತಿಮ ಪರಿಶೀಲನಾ ಟಿಪ್ಪಣಿ ಈ ಕೆಳಗಿನಂತಿರುತ್ತದೆ.

3) ದೂರುದಾರರು ತಮ್ಮ ದೂರಿನಲ್ಲಿ ತಿಪಟೂರು ತಾಲ್ಲೂಕು ತಿಪಟೂರು ಪಟ್ಟಣದ ಸ. ನಂ: 23/1 ಕ್ಷೇತ್ರ 1ಎ 1ಗು., ಸ. ನಂ: 21/1ಎ ಕ್ಷೇತ್ರ 1ಎ., 15ಗು., ಈ ಜಮೀನುಗಳು ದೂರುದಾರರ ತಾಯಿಯ



Scanned By Scanner Go

21

ಹೆಸರಿನಲ್ಲಿದ್ದು ಇವುಗಳನ್ನು ಭೂ ಪರಿವರ್ತನೆ ಮಾಡಿ ನಿವೇಶನಗಳಾಗಿ ವಿಂಗಡಿಸಿದ್ದು ಇರುತ್ತದೆ. ದೂರುದಾರರ ತಾಯಿಗೆ ವಯಸ್ಸಾದ ಕಾರಣ ಈ ನಿವೇಶನಗಳನ್ನು ದೂರುದಾರರ ಹೆಸರಿನಲ್ಲಿ ನೊಂದಾಯಿತ ವ್ಯವಸ್ಥಾ ಪತ್ರದ ಮುಖಾಂತರ ನೀಡಿದ್ದು ಆದರೆ ನೊಂದಣಿಯಾಗಿ 1 ವರ್ಷ ಕಳೆದರೂ ಎದುರುದಾರರು ಜೆ-ಫಾರಂ ತೆಗೆದು ನಿಯಮದಂತೆ ಹಕ್ಕು ವರ್ಗಾವಣೆ ಮಾಡಿರುವುದಿಲ್ಲ ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಂಡು ತನ್ನ ಹೆಸರಿನಲ್ಲಿ ಹಕ್ಕು ವರ್ಗಾವಣೆ ಮಾಡಲು ಆದೇಶ ನೀಡಬೇಕೆಂದು ದೂರು ಸಲ್ಲಿಸಿದ್ದಾರೆ.

4) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಿಪಟೂರು ನಗರ ಸಭೆಯ 2012-13ನೇ ಸಾಲಿನಲ್ಲಿ ಎಸ್.ಎಫ್.ಸಿ ಮುಖ್ಯ ನಿಧಿ ಯೋಜನೆಯಡಿಯಲ್ಲಿ ವಾರ್ಡ್ ನಂ: 9, 10, 11ರ ಅಡ್ಡ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ಟೆಂಡರ್ ಕರೆದು ಬಿ.ಟಿ.ಮಹೇಶ್ ಗುತ್ತಿಗೆದಾರರು ಇವರಿಗೆ ಕಾರ್ಯಾದೇಶ ನೀಡಲು ದಿ: 6.11.2012ರ ಕೌನ್ಸಿಲ್ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಅಂದಿನ ಪೌರಾಯುಕ್ತರಾಗಿದ್ದ ಶ್ರೀ.ವೆಂಕಟೇಶಯ್ಯ ಇವರು ಕಾರ್ಯಾದೇಶವನ್ನು ನೀಡಿರುತ್ತಾರೆ. ತಾನು ಫೆಬ್ರವರಿ 2013ರಲ್ಲಿ ಪೌರಾಯುಕ್ತರಾಗಿ ಹಾಜರಾಗಿದ್ದು ಈ ದೂರಿನ ಬಗ್ಗೆ ದಿ: 7.9.2013ರಂದು ತಿಳುವಳಿಕೆ ನೀಡಿದ್ದು ಆ ಸಮಯಕ್ಕಾಗಲೇ ತಾನು ಕರ್ತವ್ಯದಿಂದ ಬಿಡುಗಡೆಯಾಗಿದ್ದನು. ಈ ದೂರಿನ ವಿಷಯದ ಬಗ್ಗೆ ನ್ಯಾಯಾಲಯದಲ್ಲಿ ಒ.ಎಸ್. ನಂ: 221/2013 ಅಂತ ದಾವೆ ಹಾಕಿರುವುದರಿಂದ ದೂರುದಾರರಿಗೆ ಪರಿಯಾರ್ಯ ಮಾರ್ಗವಿರುತ್ತದೆ. ಆದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 8(1) (6) ರಂತೆ ಈ ದೂರು ಲೋಕಾಯುಕ್ತ ತನಿಖೆಗೆ ಅರ್ಹ ಇರುವುದಿಲ್ಲ ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

5) ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನಲ್ಲಿನ ಅಂಶಗಳನ್ನು ಪುನರ್ ಉಚ್ಚರಿಸಿದ್ದಾರೆ.

6. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

**ಅ) "ದೂರುದಾರರಿಗೆ ಅವರ ತಾಯಿ ನಿವೇಶನಗಳನ್ನು ನೊಂದಾಯಿತ ಕುಟುಂಬ ವ್ಯವಸ್ಥಾ ಪತ್ರದ ಮೂಲಕ ನಿವೇಶನ ಸಂ: 13,14,18 ಮತ್ತು 27 ಇವುಗಳನ್ನು ನೀಡಿದ್ದು**



Scanned By Scanner Go

ಇರುತ್ತದೆ. ಆ ನಂತರ ಈ ಕುಟುಂಬ ವ್ಯವಸ್ಥಾ ಪತ್ರದ ಪ್ರಕಾರ ತನ್ನ ಹೆಸರಿನಲ್ಲಿ ಖಾತೆ ಮಾಡಲು ಎದುರುದಾರರಿಗೆ ಅರ್ಜಿ ಸಲ್ಲಿಸಿದಾಗ ಎದುರುದಾರರು ದೂರುದಾರರ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡಿರುವುದಿಲ್ಲ ಆದ್ದರಿಂದ ದೂರುದಾರರು ಈ ದೂರು ಸಲ್ಲಿಸಿದ್ದಾರೆ.

ಆ) ಆದರೆ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಈ ದೂರಿಗೆ ಸಂಬಂಧಿತ ಆಕ್ಷೇಪಣೆಗಳನ್ನು ಸಲ್ಲಿಸದೆ ವಾರ್ಡ್ ನಂ: 9, 10, 11 ಇವುಗಳಲ್ಲಿ ಅಡ್ಡ ರಸ್ತೆ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಹೇಳಿರುತ್ತಾರೆ. ಅಲ್ಲದೆ ಇದೇ ವಿಷಯದ ಬಗ್ಗೆ ನ್ಯಾಯಾಲಯದಲ್ಲಿ ದಾವೆ ಇದ್ದು ಅದಕ್ಕಾಗಿ ದೂರುದಾರರಿಗೆ ಪರಿಯಾಯ ಮಾರ್ಗವಿದೆ ಅಂತ ತಿಳಿಸಿರುತ್ತಾರೆ. ಎದುರುದಾರರು ದೂರುದಾರರ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡದೆ ಇರುವುದಕ್ಕೆ ಈ ದಾವೆ ದಾಖಲಾಗಿರುವುದಿಲ್ಲ ಆದರೆ ದೂರುದಾರರ ನಿವೇಶನದಲ್ಲಿ ರಸ್ತೆ ನಿರ್ಮಾಣ ಮಾಡದಂತೆ ದಾವೆ ದಾಖಲಿಸಿರುತ್ತಾರೆ. ಆದ್ದರಿಂದ ಈ ದೂರಿನ ವಿಷಯಕ್ಕೂ ದಾವೆಗೂ ಯಾವುದೇ ರೀತಿ ಸಂಬಂಧವಿರುವುದಿಲ್ಲ.

ಇ) ಒಂದು ನೋಂದಾಯಿತ ದಾಖಲೆ ಆಧಾರದ ಮೇಲೆ ಹಕ್ಕು ಬದಲಾವಣೆಗೆ ಅರ್ಜಿ ಸಲ್ಲಿಸಿದಾಗ ಆ ಪ್ರಕಾರ ಆಸ್ತಿಗಳ ಖಾತೆಯನ್ನು ಬದಲಾವಣೆ ಮಾಡುವುದು ಎದುರುದಾರರ ಕರ್ತವ್ಯವಾಗಿರುತ್ತದೆ. ಆದರೆ ಎದುರುದಾರರು ಈ ಖಾತೆ ಬದಲಾವಣೆ ಮಾಡದೆ ತಮ್ಮ ಕರ್ತವ್ಯದಲ್ಲಿ ನಿರ್ಲಕ್ಷ್ಯವಹಿಸಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

7. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರು ತಮ್ಮ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

8. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.



Scanned By Scanner Go

23

9. ಎದುರುದಾರರು ಸಾರ್ವಜನಿಕ/ ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ ಕರ್ತವ್ಯ ಲೋಪವೆಸಗಿ, ಸಾರ್ವಜನಿಕ/ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ನಿಯಮ 3(1) (i) ಮತ್ತು (ii) ರನ್ವಯ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಭಾದ್ಯರಾಗಿರುವುದು ಕಂಡು ಬಂದಿರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಭಂಧ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14-ಎ ರಡಿಯಲ್ಲಿ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು ಈ ಪ್ರಾಧಿಕಾರಕ್ಕೆ ವಹಿಸ ಬೇಕೆಂದೂ ಕೋರಿದೆ.

10. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 26.10.16

[ ನ್ಯಾಯಮೂರ್ತಿ ಸುಭಾಷ್ ಬಿ ಆಡಿ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.



Scanned By Scanner Go